**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/305/2018/ARE-11

Multi Storied Building,
Dr. B.R. Ambedkar Veedhi,
Bengaluru-560001
Date: 22nd June, 2022.

# RECOMMENDATION

Sub: Departmental Inquiry against Shri M.G.Rangaraju, Surveyor, Taluk Office, Tumakuru Taluk and Tumakuru District–reg.,

Ref: 1) Government Order No.ಕಂಇ 131 ಭೂದಾಸೇ(3) 2017, Bengaluru, dated: 21/10/2017.

2) Nomination Order No.UPLOK-2/DE/305/2018, Bengaluru, dated: 03/07/2018 of Upalokayukta, State of Karnataka, Bengaluru.

3) Inquiry Report dated: 15/06/2022 of Additional Registrar of Enquiries-11, Karnataka Lokayukta, Bengaluru.

*****

The Government by its order dated: 21/10/2017 initiated the disciplinary proceedings against Shri M.G.Rangaraju, Surveyor, Taluk Office, Tumakuru Taluk and Tumakuru District (hereinafter referred to as Delinquent Government Official, for short as DGO) and entrusted the Departmental Inquiry to this Institution.

2. This Institution by Nomination Order No. UPLOK-2/DE/305/2018, Bengaluru, dated: 03/07/2018 nominated Additional Registrar of Enquiries-11, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO for the alleged charge of misconduct, said to have been committed by him.

3. The DGO, Shri M.G.Rangaraju, Surveyor, Taluk Office, Tumakuru Taluk and Tumakuru District was tried for the following charges:

**ಅನುಬಂಧ-1**
**ದೋಷಾರೋಪಣೆ**

ಮೊದಲನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಶ್ರೀ ಎಂ.ಜಿ.ರಂಗರಾಜು ಆದ ನೀವು ತುಮಕೂರು ತಾಲ್ಲೂಕು ಕಛೇರಿಯಲ್ಲಿ ಮೋಜಣಿದಾರರಾಗಿ 2015ನೇಯ ಇಸ್ವಿಯಲ್ಲಿ ಕಾರ್ಯ ನಿರ್ವಹಿಸಿಕೊಂಡಿದ್ದಾಗ ಮರೇನಹಳ್ಳಿ ಗ್ರಾಮದ ಮೋಜಣಿ ಸಂಖ್ಯೆ:70/3 ರಲ್ಲಿ ಒಂದು ಎಕರೆ ಹದಿನೇಳುವರೆ ಗುಂಟೆ ಜಮೀನಿನ ಹದ್ದುಬಸ್ತು ಸಂಬಂಧವಾಗಿ ನೀವು ಫಿರ್ಯಾದಿಯಾದ ಮರೇನಹಳ್ಳಿ ಗ್ರಾಮದ ಶ್ರೀ ತೋಪಯ್ಯ ರವರಿಂದ ದಿನಾಂಕ: 01/04/2015 ರಂದು ನಿಮ್ಮ ಕಛೇರಿಯಲ್ಲಿ ಅಕ್ರಮ ಸಂಭಾವನೆಯೆಂದು ರೂ. 1,800/- ಗಳನ್ನು ಒತ್ತಾಯಿಸಿ ಪಡೆದುಕೊಂಡು ಆ ಮೂಲಕ ನೀವು ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

ಎರಡನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಶ್ರೀ ಎಂ.ಜಿ.ರಂಗರಾಜು ಆದ ನೀವು ತುಮಕೂರು ತಾಲ್ಲೂಕು ಕಛೇರಿಯಲ್ಲಿ ಮೋಜಣಿದಾರರಾಗಿ 2015ನೆಯ ಇಸವಿಯಲ್ಲಿ ಕಾರ್ಯ ನಿರ್ವಹಿಸಿಕೊಂಡಿದ್ದಾಗ ಮರೇನಹಳ್ಳಿ ಗ್ರಾಮದ ಮೋಜಣಿ ಸಂಖ್ಯೆ: 70/3 ರಲ್ಲಿ ಒಂದು ಎಕರೆ ಹದಿನೇಳುವರೆ ಗುಂಟೆ ಜಮೀನಿನ ಹದ್ದುಬಸ್ತು ಸಂಬಂಧವಾಗಿ ತುಮಕೂರು ಲೋಕಾಯುಕ್ತ ಆರಕ್ಷಕ ಠಾಣೆಯ ಅಪರಾಧ ಸಂಖ್ಯೆ 2/2015 ರಲ್ಲಿನ ಫಿರ್ಯಾದಿಯಾದ ಮರೇನಹಳ್ಳಿ ಗ್ರಾಮದ ನಿವಾಸಿಯಾದ ಶ್ರೀ ತೋಪಯ್ಯ ರವರಿಂದ ದಿನಾಂಕ: 16/04/2012 ರಂದು ಮದ್ಯಾಹ್ನ 12:25 ಗಂಟೆಯಿಂದ 12:45 ಗಂಟೆಯ ಅವದಿಯಲ್ಲಿ ತುಮಕೂರಿನಲ್ಲಿರುವ "ಮಾತೃ ಸೌಹಾರ್ದ ಪತ್ತಿನ ಸಹಕಾರ ನಿಗಮ" ದ ಬಳಿ ಇರುವ ಚಹಾ ಅಂಗಡಿಯ ಬಳಿಯಲ್ಲಿ ಎಂದರೆ ಪೂರ್ವಕ್ಕೆ ಮಂಜುನಾಥ ಚಹಾ ಅಂಗಡಿ ಮತ್ತು "ಮಾತೃ ಸೌಹಾರ್ದ ಪತ್ತಿನ ಸಹಕಾರ ನಿಗಮ" ದ ಕಟ್ಟಡ, ಪಶ್ಚಿಮಕ್ಕೆ ತುಮಕೂರು ಜಿಲ್ಲಾಧಿಕಾರಿಯವರ ಕಟ್ಟಡದ ಆವರಣದ ಗೋಡೆ, ಉತ್ತರಕ್ಕೆ ಜಿಲ್ಲಾ ಆರೋಗ್ಯಾಧಿಕಾರಿಯವರ ಕಛೇರಿಗೆ ಹೋಗುವ ರಸ್ತೆ ಮತ್ತು ದಕ್ಷಿಣಕ್ಕೆ ಗುಂಚಿ ಉತ್ತರದ ಕಡೆಗೆ ಹೋಗುವ ರಸ್ತೆಯ ಚೌತರ್ಪಿಗೊಳಪಟ್ಟ ಚಹಾ ಅಂಗಡಿಯ ಬಳಿಯಲ್ಲಿ ರೂ. 5,000/- ಗಳನ್ನು ಅಕ್ರಮ ಸಂಭಾವನೆಯೆಂದು ಒತ್ತಾಯಿಸಿ ಪಡೆದುಕೊಂಡು ಸದರಿ ಹಣ ನಿಮ್ಮ ಬಳಿ ಬಂದಿದ್ದ ಬಗ್ಗೆ ತುಮಕೂರು ಲೋಕಾಯುಕ್ತ ಆರಕ್ಷಕ ಠಾಣೆಯ ಅಪರಾಧ ಸಂಖ್ಯೆ: 2/2015 ರಲ್ಲಿನ ಪ್ರಕರಣದ ತನಿಖಾಧಿಕಾರಿಯಾದ ತುಮಕೂರು ಲೋಕಾಯುಕ್ತ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರ ಮುಂದೆ ಸದರಿ ಪ್ರಕರಣದ ತನಿಖಾ ಕಾಲದಲ್ಲಿ ಸೂಕ್ತ ಉತ್ತರವನ್ನು ನೀವು ನೀಡಲು ವಿಫಲರಾಗಿ ಕರ್ತವ್ಯ ಲೋಪವನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ

ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

4. During the pendency of the Inquiry, on 04/06/2022, DGO appeared in person and files Application with copy of orders passed on IA No.I/2021 in Criminal Appeal No.1822/2021 dated: 22/12/2021 and dismissal order No.SSLR/ADM/15011/03/2022, dated: 12/01/2022 and seeks to stop the proceedings.

5. On perusal of the documents it reveals that, DGO was convicted and order of sentence by VII Additional Sessions and Special Judge at Tumkur, in Special case No.226/2016, dated: 29/11/2021. Being aggrieved by the said Judgment, the DGO has preferred Criminal Appeal No.1822/2021 before the Hon'ble High Court of Karnataka, Bengaluru Bench pleased to partly allowed the said Appeal on 22/12/2021 and confirmed the conviction and the sentence is suspended.

6. On perusal of the judgment and on consideration of the totality of circumstances, it is held that, DGO is not a Government servant in view of conviction by the VII Additional Sessions and Special Judge at Tumkur, and same is confirmed by Hon'ble High Court of Karnatka, Bengaluru Bench. Therefore, present proceedings may

be closed at present subject to till any order of reinstatement, challenging the order passed in Criminal Appeal No. No.1822/2021, dated: 22/12/2021 passed by Hon'ble High Court of Karnataka, Bengaluru Bench. Hence, the instant proceedings against the DGO do not survive for consideration at present.

> "The proceedings initiated against DGO, Shri M.G.Rangaraju, Surveyor, Taluk Office, Tumakuru Taluk and Tumakuru District needs to be stopped for the present in view of the fact that the DGO is not a Government Servant. The Inquiry against him shall be continued from the stage where it was stopped, subject to any order of reinstatement if preferred by DGO, Challenging the order passed in Criminal Appeal No.1822/2021, dated: 22/12/2021 passed by Hon'ble High Court of Karnataka, Bengaluru Bench".

7. Therefore, it is hereby recommended to the Government to accept the report of Inquiry Officer and to close the proceedings against DGO, Shri M.G.Rangaraju, Surveyor, Taluk Office, Tumakuru Taluk and Tumakuru District for the time being, subject to re-opening of the case from the stage it is closed subject to any order of reinstatement, Challenging the order passed in Criminal Appeal

21

No.1822/2021, dated: 22/12/2021 passed by Hon'ble High Court of Karnataka, Bengaluru Bench.

8. Action taken in the matter shall be intimated to this Authority.

Connected records are enclosed herewith.

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

**KARNATAKA LOKAYUKTA**

NO. UPLOK-2/DE/305/2018/ARE-11

M.S.Building,
Dr. B.R. Ambedkar Veedhi,
Bengaluru-560 001,
Date: 15/06/2022.

:: **R E P O R T**::

Sub: Departmental Enquiry against Sri. M.G.Rangaraju, Surveyor, Taluk Office, Tumakuru Taluk and District -reg.

Ref: 1. Government Order No. ಕಂಇ 131 ಭೂದಾಸೇ(3) 2017 Bengaluru, dated 21/10/2017.
2. Nomination Order No. UPLOK-2/DE/305/2018 Bengaluru, dated 03/07/2018.

*****

1. The Departmental Enquiry is initiated against Sri. M.G.Rangaraju, Surveyor, Taluk Office, Tumakuru Taluk and District. On the basis of the complaint dated 15/04/2015 filed by the complainant, Shri. Thopaiah, Agricultirst, Maralenahalli Grama, Tumakuru Dist, the allegations in the complaint is that the complainant had applied for Haddubastu to Sy.No.70/3 measuring 1 acre 17 guntas of Marenahalli, Tumakuru belonging to his mother-

in-law Gangamma and at that time DGO demanded and accepted Rs.1,800/- from the complainant and further bribe of Rs.5,000/- demanded from the complainant. As the complainant was not willing to pay the bribe amount appeared before Lokayukta Police Station, Tumkuru on 01/04/2015 and on verifying the recorded version recorded in the mobile of the complainant, the Police Inspector, Karnataka Lokayukta, Tumakuru (hereinafter referred to as "Investigating Officer") registered case in Cr.No.02/2015 against the DGO for the offences punishable under section 7,13(1)(d) r/w 13(2) of P.C.Act, 1988.

2. The Investigating Officer took up investigation and on 16/04/2015 the DGO was caught red-handed nearby tea-shop of Mathru Souharda Credit Co-operative Society Ltd, Tumakuru. The Investigating Officer seized the tainted amount Rs.5,000/- from the DGO after following post trap formalities. The DGO failed to give satisfactory explanation about possession of the tainted amount. After completion of investigation the investigating officer has filed charge sheet against the DGO in the concerned jurisdictional Court.

3. Hon'ble Upalokayukta invoking power vested under section 7(2) of the Karnataka Lokayukta Act, 1984, took up investigation and on perusal of complaint, FIR, Mahazars, FSL report and other documents, found prima facie case and

15/6

forwarded report dated 12/05/2017 U/s 12(3) of Karnataka Lokayukta Act, 1984 recommended the competent authority to initiate disciplinary proceedings against the DGO and to entrust the enquiry to the Hon'ble Upalokayukta, Karnataka under Rule 14-A of the KCS (CC& A) Rules 1957. The Government by order dated 21/10/2017 entrusted the matter to the Hon'ble Upalokayukta.

4. The Hon'ble Upalokayukta by order dated 03/07/2018, nominated Additional Registrar Enquiries-11 to conduct the enquiry.

5. The Articles of charge as framed by Additional Registrar Enquiries-11 is as follows:

<u>ಅನುಬಂಧ-1</u>

**<u>ದೋಷಾರೋಪಣೆ</u>**

ಮೊದಲನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಶ್ರೀ ಎಂ.ಜಿ.ರಂಗರಾಜು ಆದ ನೀವು ತುಮಕೂರು ತಾಲ್ಲೂಕು ಕಛೇರಿಯಲ್ಲಿ ಮೋಜಣಿದಾರರಾಗಿ 2015ನೆಯ ಇಸವಿಯಲ್ಲಿ ಕಾರ್ಯ ನಿರ್ವಹಿಸಿಕೊಂಡಿದ್ದಾಗ ಮರೇನಹಳ್ಳಿ ಗ್ರಾಮದ ಮೋಜಣಿ ಸಂಖ್ಯೆ: 70/3 ರಲ್ಲಿ ಒಂದು ಎಕರೆ ಹದಿನೇಳುವರೆ ಗುಂಟೆ ಜಮೀನಿನ ಹದ್ದುಬಸ್ತು ಸಂಬಂಧವಾಗಿ ನೀವು ಫಿರ್ಯಾದಿಯಾದ ಮರೇನಹಳ್ಳಿ ಗ್ರಾಮದ ಶ್ರೀ ತೋಪಯ್ಯ ರವರಿಂದ ದಿನಾಂಕ: 01/04/2015 ರಂದು ನಿಮ್ಮ ಕಛೇರಿಯಲ್ಲಿ ಅಕ್ರಮ ಸಂಭಾವನೆಯೆಂದು ರೂ. 1,800/- ಗಳನ್ನು ಒತ್ತಾಯಿಸಿ ಪಡೆದುಕೊಂಡು ಆ ಮೂಲಕ ನೀವು ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

15/6

ಎರಡನೆಯದಾಗಿ:- ಆಪಾದಿತ ಸರ್ಕಾರಿ ನೌಕರರಾದ ಶ್ರೀ ಎಂ.ಜಿ.ರಂಗರಾಜು ಆದ ನೀವು ತುಮಕೂರು ತಾಲ್ಲೂಕು ಕಛೇರಿಯಲ್ಲಿ ಮೋಜಣಿದಾರರಾಗಿ 2015ನೆಯ ಇಸವಿಯಲ್ಲಿ ಕಾರ್ಯ ನಿರ್ವಹಿಸಿಕೊಂಡಿದ್ದಾಗ ಮರೇನಹಳ್ಳಿ ಗ್ರಾಮದ ಮೋಜಣಿ ಸಂಖ್ಯೆ: 70/3 ರಲ್ಲಿ ಒಂದು ಎಕರೆ ಹದಿನೇಳುವರೆ ಗುಂಟೆ ಜಮೀನಿನ ಹದ್ದುಬಸ್ತು ಸಂಬಂಧವಾಗಿ ತುಮಕೂರು ಲೋಕಾಯುಕ್ತ ಆರಕ್ಷಕ ಠಾಣೆಯ ಅಪರಾಧ ಸಂಖ್ಯೆ 2/2015 ರಲ್ಲಿನ ಫಿರ್ಯಾದಿಯಾದ ಮರೇನಹಳ್ಳಿ ಗ್ರಾಮದ ನಿವಾಸಿಯಾದ ಶ್ರೀ ತೋಪಯ್ಯ ರವರಿಂದ ದಿನಾಂಕ: 16/04/2012 ರಂದು ಮದ್ಯಾಹ್ನ 12:25 ಗಂಟೆಯಿಂದ 12:45 ಗಂಟೆಯ ಅವದಿಯಲ್ಲಿ ತುಮಕೂರಿನಲ್ಲಿರುವ "ಮಾತೃ ಸೌಹಾರ್ದ ಪತ್ತಿನ ಸಹಕಾರ ನಿಗಮ" ದ ಬಳಿ ಇರುವ ಚಹಾ ಅಂಗಡಿಯ ಬಳಿಯಲ್ಲಿ ಎಂದರೆ ಪೂರ್ವಕ್ಕೆ ಮಂಜುನಾಥ ಚಹಾ ಅಂಗಡಿ ಮತ್ತು "ಮಾತೃ ಸೌಹಾರ್ದ ಪತ್ತಿನ ಸಹಕಾರ ನಿಗಮ" ದ ಕಟ್ಟಡ, ಪಶ್ಚಿಮಕ್ಕೆ ತುಮಕೂರು ಜಿಲ್ಲಾಧಿಕಾರಿಯವರ ಕಟ್ಟಡದ ಆವರಣದ ಗೋಡೆ, ಉತ್ತರಕ್ಕೆ ಜಿಲ್ಲಾ ಆರೋಗ್ಯಾಧಿಕಾರಿಯವರ ಕಛೇರಿಗೆ ಹೋಗುವ ರಸ್ತೆ ಮತ್ತು ದಕ್ಷಿಣಕ್ಕೆ ಗುಂಚಿ ಉತ್ತರದ ಕಡೆಗೆ ಹೋಗುವ ರಸ್ತೆಯ ಚೌತರ್ಫಿಗೊಳಪಟ್ಟ ಚಹಾ ಅಂಗಡಿಯ ಬಳಿಯಲ್ಲಿ ರೂ. 5,000/- ಗಳನ್ನು ಅಕ್ರಮ ಸಂಭಾವನೆಯೆಂದು ಒತ್ತಾಯಿಸಿ ಪಡೆದುಕೊಂಡು ಸದರಿ ಹಣ ನಿಮ್ಮ ಬಳಿ ಬಂದಿದ್ದ ಬಗ್ಗೆ ತುಮಕೂರು ಲೋಕಾಯುಕ್ತ ಆರಕ್ಷಕ ಠಾಣೆಯ ಅಪರಾಧ ಸಂಖ್ಯೆ: 2/2015 ರಲ್ಲಿನ ಪ್ರಕರಣದ ತನಿಖಾಧಿಕಾರಿಯಾದ ತುಮಕೂರು ಲೋಕಾಯುಕ್ತ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರ ಮುಂದೆ ಸದರಿ ಪ್ರಕರಣದ ತನಿಖಾ ಕಾಲದಲ್ಲಿ ಸೂಕ್ತ ಉತ್ತರವನ್ನು ನೀವು ನೀಡಲು ವಿಫಲರಾಗಿ ಕರ್ತವ್ಯ ಲೋಪವನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

6. The statement of imputations of misconduct as framed by Additional Registrar Enquiries-11 is as follows:

## ಅನುಬಂಧ–2

## ದೋಷಾರೋಪಣೆಯ ವಿವರ

ದೂರುದಾರರಾದ ತುಮಕೂರು ಜಿಲ್ಲೆಯ ಮರೇನಹಳ್ಳಿ ನಿವಾಸಿಯಾದ ಶ್ರೀ ತೋಪಯ್ಯ ರವರು ತುಮಕೂರು ಲೋಕಾಯುಕ್ತ ಆರಕ್ಷಕ ಠಾಣೆಯ ಅಪರಾಧ ಸಂಖ್ಯೆ: 2/2015 ರಲ್ಲಿನ ಪ್ರಕರಣಕ್ಕೆ ಸಂಬಂಧಪಟ್ಟ ಫಿರ್ಯಾದಿನಲ್ಲಿ ಮರಳೇನಹಳ್ಳಿ ಗ್ರಾಮದ ಮೋಜಣಿ ಸಂಖ್ಯೆ: 70/3ರಲ್ಲಿ ಒಂದು ಎಕರೆ ಹದಿನೇಳು ಗುಂಟೆ ಜಮೀನಿನ ಹದ್ದುಬಸ್ತು ಮಾಡಿ ಕೊಡುವ ಸಂಬಂಧ ಮೋಜಣಿ ಅಧಿಕಾರಿಯವರನ್ನು ಭೇಟಿ ಮಾಡಿದಾಗ ಮೋಜಣಿ ಕಾರ್ಯ ನಡೆಸಲು ಒಪ್ಪಿ ದಿನಾಂಕ 19–03–2015 ಮತ್ತು 25–03–2015 ರಂದು ಮೋಜಣಿ ನಡೆಸಿರುತ್ತಾರೆ. ಈ ಸಂಬಂಧವಾಗಿ ಫಿರ್ಯಾದಿಯು ನಿಮ್ಮನ್ನು ದಿನಾಂಕ: 27–03–2015ರಂದು ಭೇಟಿ ಮಾಡಿದಾಗ ನೀವು ಶುಲ್ಕ ಕೊಡಬೇಕೆಂದು ಕೇಳಿದ್ದು ತರುವಾಯ ಫಿರ್ಯಾದಿಯು ದಿನಾಂಕ 01–04–2015ರಂದು ತಮ್ಮ ಮಗನಾದ ಸೋಮಶೇಖರ್ ರವರೊಂದಿಗೆ ನಿಮ್ಮ ಕಛೇರಿಗೆ ಬಂದಿದ್ದು ಆ ಸಮಯದಲ್ಲಿ ಸದರಿ ಜಮೀನಿನ ದಾಖಲಾತಿಗಳು ಶಿಥಿಲವಾಗಿರುವುದರಿಂದ ಸದರಿ ದಾಖಲೆಗಳನ್ನು ಪುನರ್ ನಿರ್ಮಾಣ ಮಾಡಿ ಹದ್ದುಬಸ್ತು ಮಾಡಿಕೊಡಲು ಅರ್ಜಿಯನ್ನು ಬರೆದು ಸದರಿ ಅರ್ಜಿಗೆ ಫಿರ್ಯಾದಿಯ ಅತ್ತೆಯವರ ಸಹಿ ಮಾಡಿಸಿಕೊಂಡು ಬರಲು ಮತ್ತು ಸರ್ಕಾರಿ ಶುಲ್ಕ ಹಾಗೂ ನಿಮ್ಮ ಶುಲ್ಕ ಕೊಡಬೇಕಾಗುತ್ತದೆ ಎಂದು ನೀವು ಫಿರ್ಯಾದಿಗೆ ಒತ್ತಾಯಿಸಿ ನಂತರ ನೀವು ಫಿರ್ಯಾದಿಯಿಂದ ಅಂದು ರೂ.1,800/–ಗಳನ್ನು ಮುಂಗಡವಾಗಿ ಪಡೆದು ರೂ.10,000/–ಗಳನ್ನು ನೀಡಲು ನೀವು ಒತ್ತಾಯಿಸಿರುವುದನ್ನು ಫಿರ್ಯಾದಿಯು ಮೊಬೈಲ್ ಉಪಕರಣದಲ್ಲಿ ಧ್ವನಿ ಮುದ್ರಿಸಿಕೊಂಡು ತರುವಾಯ ದಿನಾಂಕ 13–04–2015ರಂದು ಫಿರ್ಯಾದಿಯು ನಿಮ್ಮನ್ನು ಭೇಟಿ ಮಾಡಿದಾಗ ನೀವು ರೂ.5,000/–ಗಳನ್ನು ಕೊಡುವಂತೆ ಒತ್ತಾಯಿಸಿದ್ದು ಸದರಿ ಹಣವನ್ನು ಹೊಂದಿಸಿಕೊಂಡು ಬರುವುದಾಗಿ ಫಿರ್ಯಾದಿಯು ನಿಮಗೆ ಹೇಳಿ ನಂತರ ಫಿರ್ಯಾದಿಯು ತುಮಕೂರಿನ ಲೋಕಾಯುಕ್ತ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರನ್ನು ದಿನಾಂಕ 16–04–2015ರಂದು ಭೇಟಿ ಮಾಡಿ ನಿಮ್ಮ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

15/6

74

ಫಿರ್ಯಾದಿಯು ಸಲ್ಲಿಸಿದ ದೂರಿನ ಆಧಾರದ ಮೇಲೆ ತುಮಕೂರು ಲೋಕಾಯುಕ್ತ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರು ನಿಮ್ಮ ವಿರುದ್ಧ ಅಪರಾಧ ಸಂಖ್ಯೆ: 2/2015ರಲ್ಲಿ ಲಂಚ ಪ್ರತಿಬಂಧಕ ಕಾಯ್ದೆ 1988 ವಿಧಿ 7, 13(1)(ಡಿ) ಜೊತೆಗೋದಿ 13(2) ರಡಿಯಲ್ಲಿ ಪ್ರಕರಣವನ್ನು ನಿಮ್ಮ ವಿರುದ್ಧ ನೊಂದಾಯಿಸಿ ಪ್ರಥಮ ವರ್ತಮಾನ ವರದಿಯನ್ನು ತುಮಕೂರಿನ 2ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ತರುವಾಯ ತುಮಕೂರು ಲೋಕಾಯುಕ್ತ ಆರಕ್ಷಕ ಠಾಣೆಯ ಆರಕ್ಷಕ ನಿರೀಕ್ಷಕರು ಎಂದರೆ ಅಪರಾಧ ಸಂಖ್ಯೆ: 2/2015 ರಲ್ಲಿಯ ತನಿಖಾಧಿಕಾರಿಯವರು ನೆರಳು ಸಾಕ್ಷಿಯಾಗಿ ಶ್ರೀ ಜಿ.ಕೆ.ಕುಮಾರ್‌ನಾಗ್ ಮತ್ತು ಪಂಚ ಸಾಕ್ಷಿಯಾಗಿ ಶ್ರೀ ಹೆಚ್.ಮಹೇಶ್ ರವರನ್ನು ತುಮಕೂರು ಲೋಕಾಯುಕ್ತ ಆರಕ್ಷಕ ಠಾಣೆಗೆ ಕರೆಸಿ ಅವರನ್ನು ಕರೆಸಿದ ಉದ್ದೇಶವನ್ನು ತಿಳಿಸಿ ಫಿರ್ಯಾದಿಗೆ ಪರಿಚಯ ಮಾಡಿಕೊಟ್ಟರು. ಫಿರ್ಯಾದಿಯು ಹಾಜರು ಮಾಡಿದ ಒಂದು ಮೊಬೈಲ್ ಉಪಕರಣದಲ್ಲಿದ್ದ ಧ್ವನಿಗಳನ್ನು ಮೇಲ್ಕಂಡ ಇಬ್ಬರು ಸಾಕ್ಷಿಗಳಿಗೆ ತನಿಖಾಧಿಕಾರಿಯವರು ಕೇಳಿಸಿದರು. ನಂತರ ಆ ಸಂಭಾಷಣೆಗಳನ್ನು ಲ್ಯಾಪ್‌ಟಾಪ್ ಮುಖಾಂತರ ಕಾಂಪ್ಯಾಕ್ಟ್ ಡಿಸ್ಕ್‌ಗೆ ಅಳವಡಿಸಿ ಕಾಂಪ್ಯಾಕ್ಟ್ ಡಿಸ್ಕ್ ಅನ್ನು ವಶಪಡಿಸಿಕೊಂಡರು ಮತ್ತು ಆ ಸಂಭಾಷಣೆಗಳನ್ನು ಹಾಳೆಯ ಮೇಲೆ ಲಿಪೀಕರಿಸಿದರು. ಫಿರ್ಯಾದಿಯು ತನಿಖಾಧಿಕಾರಿಯವರ ಮುಂದೆ ರೂ. 500/- ಮುಖಬೆಲೆಯ ಹತ್ತು ನೋಟುಗಳನ್ನು ಹಾಜರು ಮಾಡಿದ್ದು ಆ ನೋಟುಗಳ ಸಂಖ್ಯೆಗಳನ್ನು ತನಿಖಾಧಿಕಾರಿಯವರು ಹೆಚ್.ಮಹೇಶ್ ರವರ ಮುಖಾಂತರ ಒಂದು ಹಾಳೆಯ ಮೇಲೆ ಬರೆಸಿದರು. ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿ ಮುಖಾಂತರ ಮೇಲ್ಕಂಡ ನಗದು ರೂ. 5,000/- ಮೌಲ್ಯದ ನೋಟುಗಳ ಮೇಲೆ ಫಿನಾಪ್ತಲಿನ್ ಪುಡಿಯನ್ನು ಲೇಪಿಸಿದರು. ತಮ್ಮ ಸಿಬ್ಬಂದಿ ಮುಖಾಂತರ ತನಿಖಾಧಿಕಾರಿಯವರು ನೀರು ಮತ್ತು ಸೋಡಿಯಂ ಕಾರ್ಬೋನೇಟ್ ಬಳಸಿ ದ್ರಾವಣ ತಯಾರಿಸಿ ಅದರ ಮಾದರಿಯನ್ನು ಒಂದು ಶೀಸೆಯಲ್ಲಿ ಪಡೆದುಕೊಂಡು ಮಿಕ್ಕುಳಿದ ದ್ರಾವಣಗಳಲ್ಲಿ ಹೆಚ್.ಮಹೇಶ್ ರವರ ಕೈಗಳ ಬೆರಳುಗಳನ್ನು ತೊಳೆಸಿದರು. ಆ ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿತು. ಆ ದ್ರಾವಣವನ್ನು ತನಿಖಾಧಿಕಾರಿಯವರು ಶೀಸೆಯಲ್ಲಿ

15/6

ವಶಪಡಿಸಿಕೊಂಡರು. ಒಂದು ಧ್ವನಿ ಮುದ್ರಕವನ್ನು ತನಿಖಾಧಿಕಾರಿಯವರು ಫಿರ್ಯಾದಿಗೆ ಕೊಟ್ಟು ನಿಮ್ಮ ಬಳಿ ಬರಬೇಕಾದರೆ ಧ್ವನಿ ಮುದ್ರಕವನ್ನು ಚಾಲನಾ ಸ್ಥಿತಿಯಲ್ಲಿ ಇಟ್ಟುಕೊಳ್ಳುವಂತೆ ತಿಳಿಸಿ ಪ್ರಾಯೋಗಿಕ ಪಂಚನಾಮೆಯನ್ನು ಜರುಗಿಸಿದರು.

ನಂತರ ಅದೇ ದಿನ ಎಂದರೆ ದಿನಾಂಕ: 16/04/2015 ರಂದು ತನಿಖಾಧಿಕಾರಿಯವರು ಅವರ ಸಿಬ್ಬಂದಿಗಳು, ಫಿರ್ಯಾದಿ, ಜಿ.ಕೆ.ಕುಮಾರ್‌ನಾಗ್ ಮತ್ತು ಹೆಚ್. ಮಹೇಶ್ ರವರೊಡನೆ ತುಮಕೂರು ಲೋಕಾಯುಕ್ತ ಆರಕ್ಷಕ ಠಾಣೆಯಿಂದ ಮದ್ಯಾಹ್ನ 12:20 ಗಂಟೆಗೆ ಹೊರಟು ತುಮಕೂರಿನ ಜಿಲ್ಲಾಧಿಕಾರಿಯವರ ಕಛೇರಿಯ ಬಳಿ ಇರುವ "ಮಾತೃ ಸೌಹಾರ್ದ ಪತ್ತಿನ ಸಹಕಾರ ನಿಗಮ" ಕಟ್ಟಡದ ಬಳಿ ಮದ್ಯಾಹ್ನ 12:25 ಗಂಟೆಗೆ ತಲುಪಿದರು. ನಂತರ ಫಿರ್ಯಾದಿ ಮತ್ತು ನೆರಳು ಸಾಕ್ಷಿಯಾದ ಜಿ.ಕೆ.ಕುಮಾರ್‌ನಾಗ್ ರವರು ಆ ಸ್ಥಳದಿಂದ ಹೊರಟಾಗ ನೀವು ಫಿರ್ಯಾದಿಯ ಮೊಬೈಲ್ ಸಂಖ್ಯೆಗೆ ಕರೆ ಮಾಡಿ ನೀವು ಇರುವ ಸ್ಥಳವನ್ನು ವಿಚಾರಿಸಿಕೊಂಡು ನಿಮ್ಮ ಕಛೇರಿಗೆ ಹೋಗುವಂತೆ ತಿಳಿಸಿದ್ದು ನಂತರ ಫಿರ್ಯಾದಿ ಮತ್ತು ನೆರಳು ಸಾಕ್ಷಿ ನಿಮ್ಮ ಕಛೇರಿಗೆ ಬಂದಾಗ ನೀವು ಅಲ್ಲಿ ಇರಲಿಲ್ಲವಾದ ಕಾರಣ ಫಿರ್ಯಾದಿ ನಿಮ್ಮನ್ನು ಮೊಬೈಲ್ ಮುಖಾಂತರ ಸಂಪರ್ಕಿಸಿದಾಗ ನಿಮ್ಮ ಕಛೇರಿಯ ಹೊರ ಭಾಗದಲ್ಲಿರುವ ಚಹಾ ಅಂಗಡಿಯ ಬಳಿಗೆ ಬರಲು ನೀವು ಸೂಚನೆ ಕೊಟ್ಟಿದ್ದು ನಂತರ ನಿಮ್ಮನ್ನು "ಮಾತೃ ಸೌಹಾರ್ದ ಪತ್ತಿನ ಸಹಕಾರ ನಿಗಮ" ದ ಬಳಿ ಇರುವ ಚಹಾ ಅಂಗಡಿಯ ಹತ್ತಿರ ಕರೆದುಕೊಂಡು ಹೋಗಿದ್ದು ಅಲ್ಲಿ ಲಂಚದ ಹಣವನ್ನು ಕೊಡುವಂತೆ ನೀವು ಕೇಳಿದ್ದು ಆ ಕಾರಣಕ್ಕಾಗಿ ಫಿರ್ಯಾದಿಯು ನಿಮಗೆ ಮೇಲ್ಕಂಡ ಪುಡಿ ಲೇಪಿತ ನೋಟುಗಳನ್ನು ಕೊಟ್ಟಿದ್ದು ನೀವು ಆ ನೋಟುಗಳನ್ನು ಎಡಗೈಯಿಂದ ಪಡೆದುಕೊಂಡಿರುತ್ತೀರಿ. ತರುವಾಯ ಆ ಬಗ್ಗೆ ಫಿರ್ಯಾದಿಯು ತನಿಖಾಧಿಕಾರಿಯವರಿಗೆ ಸೂಚನೆ ಕೊಡುವುದನ್ನು ನೀವು ಗಮನಿಸಿ ತಕ್ಷಣ ಒಂದು ದ್ವಿಚಕ್ರ ವಾಹನದಲ್ಲಿ ಕುಳಿತು ನೀವು ಅಲ್ಲಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸಿದ್ದು ಲೋಕಾಯುಕ್ತ ಆರಕ್ಷಕ ಸಿಬ್ಬಂದಿಯವರು ಬರುವುದನ್ನು ನೀವು ಗಮನಿಸಿ ತಕ್ಷಣ ಪುಡಿ ಲೇಪಿತ ನೋಟುಗಳನ್ನು ನೀವು ನೆಲದ ಮೇಲೆ ಎಸೆದಿರುತ್ತೀರಿ.

15/6

ನಂತರ ತನಿಖಾಧಿಕಾರಿಯವರು ನಿಮಗೆ ವಿಷಯ ತಿಳಿಸಿ ನಿಮ್ಮನ್ನು ಅಂದು ಮಧ್ಯಾಹ್ನ 12:50 ಗಂಟೆಗೆ ದಸ್ತಗಿರಿ ಮಾಡಿ ನೆಲದ ಮೇಲೆ ಬಿದ್ದಿದ್ದ ಪುಡಿ ಲೇಪಿತ ನೋಟುಗಳನ್ನು ಎತ್ತಿಕೊಂಡು ಇಟ್ಟುಕೊಳ್ಳುವಂತೆ ನೆರಳು ಸಾಕ್ಷಿಗೆ ಸೂಚಿಸಿ ನಂತರ ನಿಮ್ಮನ್ನು ತನಿಖಾಧಿಕಾರಿಯವರು "ಮಾತೃ ಸೌಹಾರ್ದ ಪತ್ತಿನ ಸಹಕಾರ ನಿಗಮ" ದ ಕಛೇರಿಯೊಳಗೆ ತಮ್ಮ ಸಿಬ್ಬಂದಿಗಳು, ಫಿರ್ಯಾದಿ, ನೆರಳು ಸಾಕ್ಷಿ ಮತ್ತು ಪಂಚ ಸಾಕ್ಷಿ ರವರ ಸಮೇತ ಹೋಗಿ ನೋಟುಗಳನ್ನು ವಶಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಎರಡು ಬಟ್ಟಲುಗಳಲ್ಲಿ ನೀರು ಮತ್ತು ಸೋಡಿಯಂ ಕಾರ್ಬೋನೇಟ್ ಪುಡಿಯನ್ನು ಬಳಸಿ ತಮ್ಮ ಸಿಬ್ಬಂದಿ ಮುಖಾಂತರ ದ್ರಾವಣವನ್ನು ತಯಾರಿಸಿ ಆ ಪೈಕಿ ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ನಿಮ್ಮ ಬಲಗೈ ಬೆರಳುಗಳನ್ನು ಮತ್ತು ಮತ್ತೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ ನಿಮ್ಮ ಎಡಗೈ ಬೆರಳುಗಳನ್ನು ತೊಳೆಸಿದ್ದು ನಿಮ್ಮ ಎಡಗೈ ಬೆರಳುಗಳನ್ನು ತೊಳೆದ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಮತ್ತು ಬಲಗೈ ಬೆರಳುಗಳನ್ನು ತೊಳೆದ ದ್ರಾವಣವು ಕೊಳೆ ಮಿಶ್ರಿತ ಬಣ್ಣಕ್ಕೆ ರೂಪಾಂತರಗೊಂಡಿರುತ್ತದೆ. ಆ ದ್ರಾವಣಗಳನ್ನು ತನಿಖಾಧಿಕಾರಿಯವರು ಪ್ರತ್ಯೇಕವಾದ ಶೀಸೆಗಳಲ್ಲಿ ವಶಪಡಿಸಿಕೊಂಡಿರುತ್ತಾರೆ.

ಫಿರ್ಯಾದಿಗೆ ಸಂಬಂಧಪಟ್ಟ ಕಡತದ ಬಗ್ಗೆ ತನಿಖಾಧಿಕಾರಿಯವರು ನಿಮ್ಮನ್ನು ವಿಚಾರಿಸಲಾಗಿ ಕಡತವು ನೀವು ಕಾರ್ಯ ನಿರ್ವಹಿಸಿಕೊಂಡಿರುವ ತಾಲ್ಲೂಕು ಭೂ ಮಾಪನ ಕಛೇರಿಯಲ್ಲಿರುವುದಾಗಿ ನೀವು ಹೇಳಿದ್ದು ನಂತರ ಅಂದು ಮಧ್ಯಾಹ್ನ 1:15 ಗಂಟೆಯ ನಂತರ ನೀವು ತನಿಖಾಧಿಕಾರಿಯವರನ್ನು, ಅವರ ಸಿಬ್ಬಂದಿಗಳನ್ನು, ಫಿರ್ಯಾದಿಯನ್ನು, ನೆರಳು ಸಾಕ್ಷಿಯನ್ನು ಮತ್ತು ಪಂಚ ಸಾಕ್ಷಿಯನ್ನು ನೀವು ಕೆಲಸ ಮಾಡಿಕೊಂಡಿರುವ ತುಮಕೂರು ತಾಲ್ಲೂಕು ಭೂ ಮಾಪನ ಕಛೇರಿಗೆ ಕರೆದುಕೊಂಡು ಹೋಗಿ ಕಡತವನ್ನು ಹಾಜರು ಮಾಡಿರುತ್ತೀರಿ. ಕಡತವನ್ನು ತನಿಖಾಧಿಕಾರಿಯವರು ವಶಪಡಿಸಿಕೊಂಡಿರುತ್ತಾರೆ. ನಿಮ್ಮನ್ನು ಕುರಿತು ಮೇಲ್ಕಂಡ ಹಣದ ಬಗ್ಗೆ ತನಿಖಾಧಿಕಾರಿಯವರು ವಿಚಾರಿಸಿದಾಗ ನೀವು ಲಿಖಿತ ಹೇಳಿಕೆಯನ್ನು ಕೊಟ್ಟಿರುತ್ತೀರಿ. ತನಿಖಾ ಕಾಲದಲ್ಲಿ ತನಿಖಾಧಿಕಾರಿಯವರು ಟ್ರ್ಯಾಪ್ ಪಂಚನಾಮೆಯನ್ನು ಜರುಗಿಸಿರುತ್ತಾರೆ ಮತ್ತು ಸಾಕ್ಷಿಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ ಹಾಗೂ

15/6

ವಶಪಡಿಸಿಕೊಳ್ಳಲಾದ ಮಾಲುಗಳನ್ನು ರಸಾಯನಿಕ ತಜ್ಞರಿಗೆ ರವಾನಿಸಿ ಅವುಗಳನ್ನು ವರದಿಯೊಂದಿಗೆ ವಾಪಸ್ಸು ಪಡೆದುಕೊಂಡಿರುತ್ತಾರೆ. ತನಿಖಾ ಕಾಲದಲ್ಲಿ ಪುಡಿ ಲೇಪಿತ ನೋಟುಗಳ ಬಗ್ಗೆ ನೀವು ಸಮಂಜಸ ಉತ್ತರವನ್ನು ತನಿಖಾಧಿಕಾರಿಯವರ ಮುಂದೆ ಕೊಡಲು ವಿಫಲರಾಗಿರುತ್ತೀರಿ.

ಫಿರ್ಯಾದಿಯವರ ಅತ್ತೆಯವರಾದ ಗಂಗಮ್ಮ ರವರ ಹೆಸರಿಗೆ ಮರೇನಹಳ್ಳಿ ಗ್ರಾಮದ ಮೋಜಣಿ ಸಂಖ್ಯೆ: 70/3 ರಲ್ಲಿಯ ಒಂದು ಎಕರೆ ಹದಿನೇಳು ಗುಂಟೆ ಜಮೀನಿನ ಖಾತೆ ಮಾಡುವ ಸಲುವಾಗಿ ನೀವು ಫಿರ್ಯಾದಿಯಿಂದ ರೂ. 1,800/- ಗಳನ್ನು ಲಂಚವಾಗಿ ದಿನಾಂಕ: 01/04/2015 ರಂದು ನಿಮ್ಮ ಕಛೇರಿಯಲ್ಲಿ ಪಡೆದುಕೊಂಡಿದ್ದು ಮುಂದುವರಿದು ಆ ಕೆಲಸ ಸಂಬಂಧವಾಗಿ ಮತ್ತೆ ಪುನ: ನೀವು ಫಿರ್ಯಾದಿಯಿಂದ ರೂ. 5,000/- ಗಳನ್ನು ಅಕ್ರಮ ಸಂಭಾವನೆಯಾಗಿ ದಿನಾಂಕ: 16/04/2015 ರಂದು ತುಮಕೂರಿನಲ್ಲಿರುವ ನಿಮ್ಮ ಕಛೇರಿಯ ಹೊರ ಭಾಗದಲ್ಲಿರುವ ಚಹಾ ಅಂಗಡಿಯ ಬಳಿಯಲ್ಲಿ ಮದ್ಯಾಹ್ನ 12:25 ಗಂಟೆಯಿಂದ 12:45 ಗಂಟೆಯ ಅವದಿಯಲ್ಲಿ ಒತ್ತಾಯಿಸಿ ಪಡೆದುಕೊಂಡು ಕರ್ತವ್ಯ ಲೋಪವನ್ನೆಸಗಿ ಸರ್ಕಾರಿ ನೌಕರನಿಗೆ ತಕ್ಕುದಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1) ರಡಿಯಲ್ಲಿದುರ್ನಡತೆಎಸಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ.

ಸದರಿ ದೂರಿಗೆ ಸಂಬಂಧಿಸಿದಂತೆ ನಿಮಗೆ ಪರಿಶೀಲನಾ ಟಿಪ್ಪಣಿಯನ್ನು ಕಳುಹಿಸಿ, ಉತ್ತರವನ್ನು ಸಲ್ಲಿಸುವಂತೆ ಸೂಚಿಸಿದ್ದು, ಅದರಂತೆ ನೀವು ಉತ್ತರವನ್ನು ಸಲ್ಲಿಸಿದ್ದು, ಸದರಿ ಉತ್ತರವು ಸಮಂಜಸವಲ್ಲವೆಂದು ಕಂಡು ಬಂದ ಕಾರಣ ನಿಮ್ಮ ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ವಿಧಿ 12(3) ರಡಿಯಲ್ಲಿ ವರದಿಯನ್ನು ಸಲ್ಲಿಸಿ, ನಿಮ್ಮ ವಿರುದ್ಧ ಶಿಸ್ತು ಕ್ರಮವನ್ನು ಜರುಗಿಸಲು ತಿಳಿಸಲಾಗಿತ್ತು. ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಯಿಂದ ಮಾಡಿರುವ ಶಿಫಾರಸ್ಸನ್ನು ಒಪ್ಪಿ ನಿಮ್ಮ ವಿರುದ್ಧ ಶಿಸ್ತು ಕ್ರಮಕೈಗೊಂಡು ವರದಿಯನ್ನು ಸಲ್ಲಿಸುವಂತೆ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿರುತ್ತದೆಯಾದ ಕಾರಣ ನಿಮ್ಮ ವಿರುದ್ಧ ಈ ಮೇಲ್ಕಂಡ ದೋಷಾರೋಪಣೆ.

15/6

76

7. Notice of Articles of charge, statement of imputation of misconduct with list of witnesses and documents was served upon the DGO. In response to the service of articles of charge, DGO entered appearance before this authority on 08/07/2019. In the course of first oral statement of the DGO recorded on 08/07/2019 he pleaded not guilty and claimed to be enquired. **The date of Retirement DGO is 31/05/2034.**

8. The DGO has not filed his Written Statement.

9. The disciplinary authority has examined three witness and got 19 documents exhibited.

10. On 04/06/2022 DGO files application with copy of orders passed on IANO I in Criminal Appeal No.1822/2021 dated 22/12/2021 and dismissal order dated 12/01/2022 and seeks to stop the proceedings.

11. On perusal of the said documents it reveals that DGO has preferred Criminal Appeal No. 1822/21 on the file of Hon'ble High Court of Karnataka against the judgment of conviction and order of sentence dated 29/11/2021 passed by IV Additional District Judge and Special Judge, Tumkur in Spl. Case No.226/16 and the sentence is suspended.

15/6

12. Thereafter, file is placed before Hon'ble Upalokayukta that DGO is dismissed from service and for kind approval to stop the proceedings till any order of reinstatement and to put up report accordingly.

13. On 05/06/2022 Hon'ble Upalokayukta has approved for putting the report of stopping the proceedings till any order of reinstatement.

14. Hence, this proceedings is stopped till any order of reinstatement.

15. Submitted to Hon'ble Upalokayukta, for kind approval and necessary action in the matter.

15/6/22

**(J.P. Archana)**
Additional Registrar (Enquiries-11),
Karnataka Lokayukta,
Bangalore.

**ANNEXURES**

List of witnesses examined on behalf of the Disciplinary Authority:-

| | |
|---|---|
| PW1:- | Sri. Thopaiah. |
| PW2:- | Sri. Kumar Nag.O.K |

15/6

UPLOK-2/DE/305/2018/ARE-11

PW3:- Sri. M.R.Goutham

List of witnesses examined on behalf DGO:-NIL.

List of documents marked on behalf of Disciplinary Authority:-

| | |
|---|---|
| Ex P1 | Xerox copy of complaint of P.W.1. |
| Ex P2 | Xerox copy of list of currency notes. |
| Ex P3 | Xerox copy of pre-trap mahazar. |
| Ex.P4 | Xerox copy of statement of DGO |
| Ex P5 | Xerox copy of tap panchanama. |
| Ex P6 | Xerox copies of photographs of pre-trap mahazar. |
| Ex P7 | Xerox copies of photographs of trap proceedings. |
| Ex P8 | Xerox copies of transcription version identified by Devaraj. |
| Ex P9 | Xerox copy of FIR in Cr.No.2/2015. |
| Ex P10 | Xerox copy of letter dated 13/02/2015 of Smt. Gangamma. |
| Ex P11 and ExP12 | Xerox copies of sketch of spot. |
| Ex P13 and Ex P14 | Xerox copy of 2 sketches received from PWD Engineer. |
| Ex P15 | Xerox copy of Chemical examiner's |

15/6

| | |
|---|---|
| | report dated 25/04/2015 |
| Ex P16 | Xerox copy of service details of DGO. |
| Ex P17 | Xerox copy of documents received from Tahasildar on 25/04/2015. |
| Ex P18 | Xerox copy of letter dated 16/04/2015 of Tahasildar. |
| Ex P19 | Xerox copy of Judgment dated 29/11/2021 passed by Learned VII Additional Sessions and Special Judge, Tumkuru. |

List of documents marked on behalf of Defence:- Nil.

15/6/22

**(J.P.Archana)**
Additionl Registrar (Enquiries-11),
Karnataka Lokayukta, Bangalore.